

ಈಶ್ವರ ಬಡಿಗೇರ

# ಎಂಜಲು ಬಿಕರಿಗಿದೆ

ಹೌದು ... ಮೊದಲಿಂದ ಹಾಗೇ ನಡೆದು ಬಂದಿದ್ದು. ಅಮ್ಮ ಅಪ್ಪನ ಪ್ರೀತಿಯಿಂದಲೇ ಶುರುವಾಗಿತ್ತದು. ಮೊದಲ ಪಾಲು ಅವಳೇ ಅನುಭವಿಸಿದ್ದು ... ಮೊದಲು ಅಮ್ಮನ ಮೊಲೆ ಚೀಪಿದ್ದು ಅವಳೇ .. ನಾನು ಮತ್ತೆರಡು ವರ್ಷಗಳ ಬಳಿಕ. ಅಕ್ಕ ದೊಡ್ಡಕಾಗಿ ಹೆಜ್ಜೆ ಊರಿದ ಜಾಗದಲ್ಲೇ ನಾನೂ ಹೆಜ್ಜೆ ಊರಿದ್ದು ! ಅವಳುಟ್ಟು ಜಬ್ಬರಿಸಿದ ಅಂಗಿ ಲಂಗ ಚಡ್ಡಿ ನನ್ನ ದೇಹ ಮುಚ್ಚಿದ್ದು .. ಶಾಲೆಯಲ್ಲೂ ಅಷ್ಟೇ ...'ಅಶ್ವಿನಿಯ ತಂಗಿ ಭರಣಿ' ಅಂತಲೇ ಎಲ್ಲ ಕರೆದಿದ್ದು. ಅವಳು ಓದಿ ಸವೆಸಿದ ಪುಸ್ತಕಗಳು, ಚೀಲಗಳು, ಚಪ್ಪಲಿಗಳು ಸಾಯುವುದು ನನ್ನ ಮಡಿಲಲ್ಲೇ ಆಗಿತ್ತು .

ಹೀಗೇ ಬೆಳೆದ ನಾನು ಈಗ ಸೇರಿದ್ದು ಆಶ್ರಯಕ್ಕೆ ಅಕ್ಕನ ಮನೆಯನ್ನೇ ... ಅಕ್ಕನ ಮದುವೆಯಾಗಿ ಸ್ವಲ್ಪ ದಿನಕ್ಕೇ ಅಮ್ಮ ಅಪ್ಪ ಸ್ವರ್ಗಕ್ಕೋ ನರಕಕ್ಕೋ ಪ್ರಯಾಣ ಬೆಳೆಸಿದ್ದರಲ್ಲ ... ಇದ್ದುದೆಲ್ಲ ಅಕ್ಕನ ಮದುವೇಲಿ ಅವಳ ಜೊತೇಲೇ ಧಾರೆ ಎರೆದು ಕೊಟ್ಟಾಗಿತ್ತಲ್ಲ ... ನನ್ನ ಓದೂ ಮುಗಿದಿಲ್ಲ ,ಮತ್ತೆಲ್ಲಿ ಹೋಗುವುದು? ಅಕ್ಕ ಕರೆಯದಿದ್ದರೂ ಅಲ್ಲಿಗೇ ಹೋಗಬೇಕಾದ ದೈನ್ಯಾವಸ್ಥೆ ಪ್ರಾಪ್ತವಾಗಿತ್ತಲ್ಲ .. ಪುಣ್ಯಕ್ಕೆ ಕರೆದಿದ್ದಳು !

ಹೀಗೆ ಇಷ್ಟೆಲ್ಲ ಇದ್ದ ಮೇಲೆ ನಾನು ನನ್ನ ಕೋಣೆಯಲ್ಲಿ ಒಬ್ಬಳೇ ಇದ್ದ ಹೊತ್ತು ( ಅಕ್ಕನೂ ಮನೆಯಲ್ಲಿ ಇಲ್ಲದ್ದು ಗೊತ್ತು) ಭಾವ ಬಂದು ಕೇಳಿದ್ದು ಸರಿಯಾಗೇ ಇದೆ. ನನ್ನ ಹಾಸಿಗೆಗೆ ಕರೆದಿದ್ದು ತಪ್ಪೆನ್ನಲಾಗಲ್ಲ. ಅಕ್ಕ ಉಪಯೋಗಿಸಿ ಬಿಟ್ಟ ಎಂಜಲೇ ಮೊದಲಿಂದ ನನ್ನ ಆಸ್ತಿ ಆಗಿತ್ತಲ್ಲವಾ? ಹಾಗೆಂದು ತಿಳಿದೇ ಬಾವ ಕೂಡಾ ನನ್ನ ಕರೆದಿದ್ದಲ್ಲವಾ ?

ಸಾಕಾಗಿ ಹೋಗಿತ್ತು ... ಒಮ್ಮೆಲೇ ಜ್ವಾಲಾಮುಖಿ ಸಿಡಿಯಿತು ... ಭೂಮಿ ಬಿರುಕಾಯ್ತು ... ಸಮುದ್ರ ಉಕ್ಕಿತು ... ಬಾನು ಕಳಚಿ ಬಿತ್ತು! ಕೂಗಿದೆ. ಇದ್ದ ಶಕ್ತಿಯೆಲ್ಲಾ ಧ್ವನಿಯಾಗಿ ಹೊರ ಹೊಮ್ಮಿತು !

'ಹೌದು ಬಾವಾ .. ಬೇರೆ ವ್ಯಕ್ತಿತ್ವ ಇಲ್ಲವೇ ಇಲ್ಲ ಅನ್ನಿಸಿದೆ. ಅಕ್ಕ ನಡೆದಲ್ಲಿ ನಡೆದೆ, ಆಡಿದಲ್ಲಿ ಆಡಿದೆ, ಅತ್ತಲ್ಲಿ ಅತ್ತೆ, ನಕ್ಕಲ್ಲಿ ನಕ್ಕೆ, ಅವಳು ಧರಿಸಿದ್ದೇ ಧರಿಸಿದೆ. ಅವಳ ಉಗುಳು ಉಂಡೇ ಬೆಳೆದೆ. ನೀವೂ ಅಕ್ಕನುಂಡ ಎಂಜಲೇ .. ನಾನು ತಿನ್ನಬಹುದು. ಆದರೆ .... ಒಮ್ಮೆ ನನಗೆ ಬಂದ ಅವಳ ಬಟ್ಟೆ ಮತ್ತವಳುಟ್ಟಿಲ್ಲ ...ಒಮ್ಮೆ ನನಗವಳು ನೀಡಿದ ಪುಸ್ತಕ ಮತ್ತವಳೋದಿಲ್ಲ .. ಮೇಲಾಗಿ ಒಂದೇ ಕ್ಲಾಸಿನಲ್ಲಿ ಅವಳೂ ನಾನೂ ಒಟ್ಟಿಗೇ ಓದಿದ್ದಿಲ್ಲ ... ಎಲ್ಲಾ ಅವಳು ಬಳಸಿ ಬಿಸುಟ ಬಳಿಕ ನನ್ನ ಪಾಲು. ಈಗ ನೀವು ಕೇಳುತ್ತಿದ್ದೀರಾ ... ನೀವೂ ಅಕ್ಕ ಉಂಡ ಮಾಲೇ .. ಇಲ್ಲ ಅಂತ ಅನ್ನೋಕಾಗಲ್ಲ.! ಆದರೆ ಬಾವಾ , ಅಕ್ಕ ಎಸೆದ ಬಳಿಕವೇ ನಾನುಣ್ಣುವುದು. ಅಂದ ಮೇಲೆ ಇದಕ್ಕೆರಡೇ ಉಪಾಯ ... ಒಂದು ಅಕ್ಕಂಗೆ ಡೈವೋರ್ಸ್ ಕೊಟ್ಟುಬಿಡಿ. ಆಗ ಅವಳು ನಿಮ್ಮನ್ನು ಉಪಯೋಗಿಸುವುದು ತಪ್ಪುತ್ತೆ ...ಇನ್ನೊಂದು.. ಅವಳನ್ನು ಸಾಯಿಸಿ ನಿಮ್ಮ ಸಂಪರ್ಕ ಕಡಿದು ಹೋಗುವಂತೆ ಮಾಡಿ. ಹೇಳಿ ಬಾವಾ, ಏನು ಮಾಡುವಿರಿ? ನಾನಂತೂ ರೆಡಿ ..ಎಂಜಲು ತಿನ್ನೋಕೆ ಕಾಯ್ತಾ ಇರ್ತೀನಿ ..ಬೇಗ ಏನಾದ್ರೂ ತೀರ್ಮಾನ ಮಾಡಿ ಬನ್ನಿ. ಈಗ ಹೊರ ಹೋಗಿ '

ತಲೆ ತಗ್ಗಿಸಿಕೊಂಡು ಹೊರ ಹೋಯ್ತು ಪ್ರಾಣಿ! ದೂರದಲ್ಲಿ ಅಕ್ಕ ಬರುತ್ತಾ ಇದ್ದಾಳೆ .. ಪಾಪ ... ಏನೂ ಗೊತ್ತಿಲ್ಲ ಅವಳಿಗೆ ... ತನ್ನ ಎಂಜಲೂ ಬಿಕರಿಗಿದೆ ಅನ್ನೋದು ಗೊತ್ತಾದರೆ ?

★ **ಆರೆಚ್ ಹಾಲಾಡಿ**